**ಕರ್ನಾಟಕ ಸರ್ಕಾರ**

ಸಂಖ್ಯೆ:80 ಐಸಿಎಸ್ 2020

ಕರ್ನಾಟಕ ಸರ್ಕಾರ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ: 31-05-2021.

**ಅಧಿಸೂಚನೆ**

**ವಿಷಯ:- ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಸಹಾಯಕ ನಿರ್ದೇಶಕರ ವೃಂದದ ಅಧಿಕಾರಿಗಳ ಜೇಷ್ಠತಾ ಪಟ್ಟಿ ಪ್ರಕಟಿಸುವ ಕುರಿತು.**

ಉಲ್ಲೇಖ:- 1) ಸರ್ಕಾರದ ಆದೇಶ ಸಂಖ್ಯೆ:ವಾಕೈ 189 ಕೈಸೇವಿ 2014, ದಿನಾಂಕ:23-12-2016.
2) ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಇವರ ಆದೇಶ ಸಂಖ್ಯೆ: ಕೈವಾಇ/ಆಡಳಿತ/ಸಿಬ್ಬಂದಿ/ಉ.ನಿ/ಮ.ವಿ/2016-17, ದಿನಾಂಕ:02-02-2017.
3) ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಇವರ ಆದೇಶ ಸಂಖ್ಯೆ: ಕೈವಾಇ/ಆಡಳಿತ/ಸಿಬ್ಬಂದಿ/ಇ2/06/2017-18, ದಿನಾಂಕ:06-04-2017 ಮತ್ತು 10-04-2017.
4) ಕೈಗಾರಿಕಾಭಿವೃದ್ಧಿ ಆಯುಕ್ತರ ಅಧಿಸೂಚನೆ ಸಂಖ್ಯೆ:ಕೈವಾಇ/ಆಡಳಿತ/ಸಿಬ್ಬಂದಿ/ಅಧೀ/23/2020-21, ದಿನಾಂಕ:06-07-2020.
5) ಅಧಿಸೂಚನೆ ಸಂಖ್ಯೆ:ಸಿಐ 80 ಐಸಿಎಸ್ 2020, ದಿನಾಂಕ:28-10-2020.
6) ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಟಿಪ್ಪಣಿ ಸಂ. ಸಿಆಸುಇ 104 ಸೇನಿಎ 2021 ದಿನಾಂಕ: 27.05.2021

@@@

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ (1)ರ ಆದೇಶದಲ್ಲಿ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ಹುದ್ದೆಗಳನ್ನು ಮರುವಿನ್ಯಾಸಗೊಳಿಸಿ ಆದೇಶಿಸಲಾಗಿದೆ. ಇದರಲ್ಲಿ ಕೈಗಾರಿಕಾ ಉತ್ತೇಜನಾಧಿಕಾರಿಗಳ 77 ಹುದ್ದೆಗಳನ್ನು ಸಹಾಯಕ ನಿರ್ದೇಶಕ ವೃಂದಕ್ಕೆ ವಿಲೀನಗೊಳಿಸಿ, ಸಹಾಯಕ ನಿರ್ದೇಶಕ ವೃಂದದ ವೃಂದ ಬಲವನ್ನು 51 ರಿಂದ 128ಕ್ಕೆ ಹೆಚ್ಚಿಸಲಾಗಿದೆ. ಈ ರೀತಿ ವಿಲೀನಗೊಂಡ ಅಧಿಕಾರಿಗಳಿಗೆ ಉಲ್ಲೇಖಿತ (2) ರ ಆದೇಶದಲ್ಲಿ ವಿಲೀನಾತಿ ಆದೇಶವನ್ನು ಹೊರಡಿಸಲಾಗಿದೆ. ತದನಂತರದಲ್ಲಿ ಕರ್ನಾಟಕ ಲೋಕಸೇವಾ ಆಯೋಗದಿಂದ ಆಯ್ಕೆಗೊಂಡ ಅಭ್ಯರ್ಥಿಗಳಿಗೆ ಉಲ್ಲೇಖಿತ (3) ರಂತೆ ನೇಮಕಾತಿ ಆದೇಶವನ್ನು ಹೊರಡಿಸಲಾಗಿದೆ.

ಆಯುಕ್ತರು, ಕೈಗಾರಿಕಾಭಿವೃದ್ಧಿ ಹಾಗೂ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಇವರ ಉಲ್ಲೇಖ (4)ರ ಅಧಿಸೂಚನೆಯಲ್ಲಿ ಇಲಾಖೆಯ ಸಹಾಯಕ ನಿರ್ದೇಶಕರ ವೃಂದದ ಅಂತಿಮ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಿರುತ್ತಾರೆ. ಸದರಿ ಅಂತಿಮ ಅಧಿಸೂಚನೆ ಪಟ್ಟಿಯು ಹಲವಾರು ನ್ಯೂನತೆಗಳಿಂದ ಕೂಡಿದ್ದು, ಈ ಹಿಂದೆ ಸರ್ಕಾರವು ಹೊರಡಿಸಿರುವ ಅಧಿಕೃತ ಜ್ಞಾಪನ ಸಂಖ್ಯೆ: ವಾಕೈ 55 ಕೈಸೇವಿ 2012, ದಿನಾಂಕ: 08.11.2013ರ ಜೇಷ್ಠತೆ ಪಟ್ಟಿಯಂತೆ 2013 ರವರೆಗೆ ಪರಿಗಣಿಸಿ, ತದನಂತರ ಇಲಾಖಾ

ವತಿಯಿಂದ ಸಹಾಯಕ ನಿರ್ದೇಶಕರ ಹುದ್ದೆಗೆ ಪರಿಗಣಿಸಿರುವ ವಿವರಗಳ ಮೇರೆಗೆ ಜೇಷ್ಠತಾ ಪಟ್ಟಿಯನ್ನು ಅಂತಿಮಗೊಳಿಸಲು ನಿರ್ದೇಶಿಸಿದ್ದರೂ ಸಹ ಇದನ್ನು ಪರಿಗಣಿಸಿರುವುದಿಲ್ಲ. ಅಂತಿಮ ಜೇಷ್ಠತಾ ಪಟ್ಟಿಯಲ್ಲಿ ದಿನಾಂಕ: 05.07.1976ರ ಅಧಿಕೃತ ಜ್ಞಾಪನ ಸಂಖ್ಯೆ: ಡಿಪಿಎಆರ್ 48 ಎಸ್‌ಎಸ್‌ಆರ್ 75 ರನ್ವಯ ಬ್ಲಾಕ್ ಅವಧಿಗಳನ್ನು ಗುರುತಿಸಬೇಕೆಂದು, ಒಂದು ಬ್ಲಾಕ್ ಅವಧಿಯಲ್ಲಿ ಲಭ್ಯವಾದ ರಿಕ್ತ ಸ್ಥಾನಗಳನ್ನು ನೇರ ನೇಮಕಾತಿ ರಿಕ್ತ ಸ್ಥಾನಗಳು ಮತ್ತು ಮುಂಬಡ್ತಿ ರಿಕ್ತ ಸ್ಥಾನಗಳೆಂದು ವರ್ಗೀಕರಣ ಮಾಡತಕ್ಕದ್ದೆಂದು, ಅದನ್ನು ಪಾಲಿಸದೇ ಉಪಯೋಗಿಸಿಕೊಳ್ಳಲಾದ ರಿಕ್ತ ಸ್ಥಾನಗಳು (utilized vacancies) ಎಂಬ ಪರಿಕಲ್ಪನೆಯನ್ನು ಜೇಷ್ಠತಾ ಪಟ್ಟಿಯಲ್ಲಿ ಅಳವಡಿಸಿಕೊಂಡಿರುವುದು ಸೂಕ್ತವಾಗಿರುವುದಿಲ್ಲ.

ಮುಂದುವರೆದು, ದಿನಾಂಕ: 23.12.2016 ರ ಇಲಾಖೆಯ ಮರುವಿನ್ಯಾಸಗೊಳಿಸಿರುವ ಆದೇಶದಲ್ಲಿ ಕೈಗಾರಿಕಾ ಉತ್ತೇಜನಾಧಿಕಾರಿ ಹುದ್ದೆಗಳನ್ನು ಸಹಾಯಕ ನಿರ್ದೇಶಕರುಗಳ ಹುದ್ದೆಗೆ ವಿಲೀನಗೊಳಿಸಿರುವುದರಿಂದ, ಅವರುಗಳು ಸಹಾಯಕ ನಿರ್ದೇಶಕರುಗಳ ವೃಂದದಿಂದ ಮುಂದಿನ ಹುದ್ದೆಗಳಿಗೆ ಮುಂಬಡ್ತಿ ಹೊಂದಿದ ನಂತರ ಅಥವಾ ನಿವೃತ್ತಿಯ ನಂತರ ಮಾತ್ರ ವರ್ಗೀಕರಣಕ್ಕೆ ಲಭ್ಯವಾಗುತ್ತಾರೆ. ಸದರಿ ಆದೇಶದನ್ವಯ ದಿನಾಂಕ: 02.02.2017ರ ಕಛೇರಿ ಆದೇಶದಲ್ಲಿ ಕೈಗಾರಿಕಾ ಉತ್ತೇಜನಾಧಿಕಾರಿಗಳನ್ನು ಸಹಾಯಕ ನಿರ್ದೇಶಕರುಗಳ ವೃಂದಕ್ಕೆ ವಿಲೀನಗೊಳಿಸಿ, ಅವರುಗಳಿಗೆ ಸ್ಥಳನಿಯುಕ್ತಿ ಆದೇಶ ಹೊರಡಿಸಿರುವುದರಿಂದ, ಇದು ಮುಂಬಡ್ತಿ ಎಂದು ಪರಿಗಣಿಸಲು ಬರುವುದಿಲ್ಲ. ಇದಲ್ಲದೇ, ಈಗಾಗಲೇ ಆಯುಕ್ತರು, ಕೈಗಾರಿಕಾಭಿವೃದ್ಧಿ ಇವರುಗಳ ಪ್ರಸ್ತಾವನೆಯಂತೆ ಕೆಲವು ಸಹಾಯಕ ನಿರ್ದೇಶಕರುಗಳಿಗೆ ಸ್ಥಾನಪನ್ನ ಮುಂಬಡ್ತಿ ನೀಡಿ, ಅವರುಗಳು ಇಲಾಖೆಯಲ್ಲಿ ಈಗ ಜಂಟಿ ನಿರ್ದೇಶಕರು ಹಾಗೂ ಉಪ ನಿರ್ದೇಶಕರುಗಳಾಗಿ 2017-18 ಸಾಲುಗಳಿಂದ ಕಾರ್ಯನಿರ್ವಹಿಸುತ್ತಿದ್ದು, ಇವರುಗಳನ್ನು ಈಗ ಸಹಾಯಕ ನಿರ್ದೇಶಕರುಗಳ ವೃಂದದ ಜೇಷ್ಠತೆಯಲ್ಲಿ ಕೆಳಗಿಡಲಾಗಿದೆ. ಆಯುಕ್ತರು, ಕೈಗಾರಿಕಾಭಿವೃದ್ಧಿ ಇವರ ಪ್ರಸ್ತಾವನೆಯಂತೆ ಕೆ.ಪಿ.ಎಸ್.ಸಿ. ಯಿಂದ ಸಹಮತಿ ಪಡೆದು ಇವರುಗಳಿಗೆ ಸಹಾಯಕ ನಿರ್ದೇಶಕರ ವೃಂದದಲ್ಲಿ ಸ್ಥಾನಪನ್ನ ಮುಂಬಡ್ತಿ ದಿನಾಂಕವನ್ನು ನಿಗದಿಪಡಿಸಲಾಗಿದೆ. ಮೇಲೆ ತಿಳಿಸಿದ ಕೈಗಾರಿಕಾ ಉತ್ತೇಜನಾಧಿಕಾರಿಗಳನ್ನು ಸಹಾಯಕ ನಿರ್ದೇಶಕರುಗಳ ವೃಂದಕ್ಕೆ ವಿಲೀನಗೊಳಿಸಿರುವ ಅಧಿಕಾರಿಗಳಿಗೆ ಜೇಷ್ಠತೆ ಅರ್ಹತಾ ದಿನಾಂಕವನ್ನೇ ನೀಡಿರುವುದಿಲ್ಲ ಮತ್ತು ಇನ್ನು ಕೆಲವು ಅಧಿಕಾರಿಗಳಿಗೆ ಜೇಷ್ಠತಾ ಪಟ್ಟಿಯಿಂದ ಹೊರಗೆ ಇಟ್ಟಿರುವುದು ಸರಿಯಾದ ಕ್ರಮವಾಗಿರುವುದಿಲ್ಲ.

ಅಲ್ಲದೇ, ಆಯುಕ್ತರು, ಕೈಗಾರಿಕಾಭಿವೃದ್ಧಿ ಇವರು ದಿನಾಂಕ: 06.07.2020 ರಂದು ಹೊರಡಿಸಿರುವ ಅಂತಿಮ ಅಧಿಸೂಚನೆ ಪಟ್ಟಿಯು ಹಲವಾರು ನ್ಯೂನತೆಗಳಿಂದ ಕೂಡಿದ್ದರಿಂದ ತೊಂದರೆಗೊಳಗಾದ ಅಧಿಕಾರಿಗಳು ಮಾನ್ಯ ಕೆ.ಎ.ಟಿ., ಬೆಂಗಳೂರು ನ್ಯಾಯಾಲಯದಲ್ಲಿ 6 ಪ್ರಕರಣಗಳನ್ನು ದಾಖಲಿಸಿದ್ದಾರೆ. ಅರ್ಜಿಗಳ ಸಂಖ್ಯೆ: 2321-2576/2020, 2598-2601/2020, 2920/2020, 3799/2020, 3773-3792/2020 ಹಾಗೂ 4003/2020ಗಳು ದಾಖಲಾಗಿರುತ್ತವೆ.

ಆಯುಕ್ತರು, ಕೈಗಾರಿಕಾಭಿವೃದ್ಧಿ ಇವರು ದಿನಾಂಕ: 06.07.2020 ರಂದು ಹೊರಡಿಸಿರುವ ಅಂತಿಮ ಅಧಿಸೂಚನೆ ಪಟ್ಟಿಯು ಹಲವಾರು ನ್ಯೂನತೆಗಳಿಂದ ಕೂಡಿದ್ದರಿಂದ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯಲ್ಲಿ ಒಂದು ಸಮಾಲೋಚಕರ ತಂಡವನ್ನು ರಚಿಸಿ, ವರದಿಯನ್ನು ನೀಡಲು ಸರ್ಕಾರದ ಆದೇಶ ಸಂಖ್ಯೆ: ವಾಕೈ 80 ಕೈಸೇವಿ 2020, ದಿನಾಂಕ: 18.09.2020 ರಲ್ಲಿ ಆದೇಶಿಸಲಾಗಿತ್ತು. ಅದರಂತೆ, ಸದರಿ ಸಮಿತಿಯು ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದು, ಸದರಿ ಸಮಾಲೋಚಕರ ಸಮಿತಿಯ ವರದಿಯನ್ವಯ ಆಯುಕ್ತರು, ಕೈಗಾರಿಕಾಭಿವೃದ್ಧಿಗೆ ತನ್ನ ಅಂತಿಮ ಅಧಿಸೂಚನೆ ಪಟ್ಟಿಯನ್ನು ಪರಿಷ್ಕರಿಸಲು ಸರ್ಕಾರವು ತನ್ನ ಪತ್ರ ಸಂಖ್ಯೆ: ವಾಕೈ 80 ಕೈಸೇವಿ 2020, ದಿನಾಂಕ: 09.10.2020 ರಲ್ಲಿ ತಿಳಿಸಿರುತ್ತದೆ.

ಆಯುಕ್ತರು, ಕೈಗಾರಿಕಾಭಿವೃದ್ಧಿ ಇವರು ತಮ್ಮ ಪತ್ರ ದಿನಾಂಕ: 25.02.2021 ರಲ್ಲಿ ಪ್ರಸ್ತುತ ಅಂತಿಮ ಜೇಷ್ಠತಾ ಪಟ್ಟಿಯಲ್ಲಿರುವ ಕ್ರ.ಸಂ. 438 ರಲ್ಲಿರುವ ಅಧಿಕಾರಿಗೆ ಲಭ್ಯವಾಗಿರುವ ಅರ್ಹತಾ ದಿನಾಂಕವನ್ನು ಜೇಷ್ಠತಾ ಪಟ್ಟಿಯ ಕ್ರ.ಸಂ. 439 ರಿಂದ 472 ರವರೆಗಿನ ಅಧಿಕಾರಿಗಳಿಗೆ ಮತ್ತು ಜೇಷ್ಠತಾ

ಪಟ್ಟಿಯ ಹೊರಗಿರುವ ಕ್ರ.ಸಂ. 1 ರಿಂದ 51 ರವರೆಗಿನ ಅಧಿಕಾರಿಗಳಿಗೆ ನೀಡಬಹುದಾಗಿದೆ ಎಂದು ತಿಳಿಸುತ್ತಾ, ಸಹಾಯಕ ನಿರ್ದೇಶಕರ ಅಂತಿಮ ಜೇಷ್ಠತಾ ಪಟ್ಟಿಯನ್ನು ನಿಯಮಾವಳಿಗಳ ಮೇರೆಗೆ ಹಾಗೂ 2018ರ ಅಧಿನಿಯಮದ ಕಲಂ 5 ರನ್ವಯ ಜೇಷ್ಠತಾ ಪಟ್ಟಿಯನ್ನು ದಿನಾಂಕ: 27.04.1978 ರಿಂದ ಪರಿಷ್ಕರಿಸಿದ್ದು, ಸದರಿ ಅಂತಿಮ ಜೇಷ್ಠತಾ ಪಟ್ಟಿಯನ್ನು ಈಗಾಗಲೇ 6 ಪ್ರಕರಣಗಳಲ್ಲಿ ಮಾನ್ಯ ಕೆ.ಎ.ಟಿ.ಯಲ್ಲಿ ಪ್ರಶ್ನಿಸಲಾಗಿರುವುದರಿಂದ, ಈಗ ಯಾವುದೇ ರೀತಿಯ ಪರಿಷ್ಕರಿಸಿದ ಜೇಷ್ಠತಾ ಪಟ್ಟಿಯನ್ನು ಹೊರಡಿಸುವುದು sub-judice ಆಗುತ್ತದೆ ಎಂದು ತಿಳಿಸಿದ್ದಾರೆ.

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಎಂಎಸ್ಎಂಇ) ರವರ ಅಧ್ಯಕ್ಷತೆಯಲ್ಲಿ ದಿನಾಂಕ: 31.03.2021 ರಂದು ಸಹಾಯಕ ನಿರ್ದೇಶಕರ ಅಂತಿಮ ಜೇಷ್ಠತಾ ಪಟ್ಟಿ ಪರಿಷ್ಕರಿಸುವ ಕುರಿತು ಸಭೆ ನಡೆಸಲಾಗಿದ್ದು, ಸಭೆಯಲ್ಲಿ ಸಿ.ಆ.ಸು. ಇಲಾಖೆಯ ಸೇವಾ ನಿಯಮಗಳು ಮತ್ತು ಆರ್ಥಿಕ ಇಲಾಖೆಯ ಪ್ರತಿನಿಧಿಗಳು ಸಭೆಯಲ್ಲಿ ಹಾಜರಿದ್ದು, ಸಭೆಯಲ್ಲಿ ಕೈಗಾರಿಕೆ ಮತ್ತು ವಾಣಿಜ್ಯ ನಿರ್ದೇಶನಾಲಯವು ದಿನಾಂಕ: 06.07.2020 ರಂದು ಪ್ರಕಟಿಸಲಾಗಿರುವ ಸಹಾಯಕ ನಿರ್ದೇಶಕರ ವೃಂದದ ಜೇಷ್ಠತಾ ಪಟ್ಟಿಯಲ್ಲಿರುವ ಮೇಲೆ ತಿಳಿಸಿರುವ ನ್ಯೂನ್ಯತೆಗಳ ಹಿನ್ನೆಲೆಯಲ್ಲಿ ಸದರಿ ಅಂತಿಮ ಜೇಷ್ಠತಾ ಪಟ್ಟಿಗೆ ಸರ್ಕಾರದ ಸಹಮತಿ ಇರುವುದಿಲ್ಲ ಎಂದು ತಿಳಿಸಲಾಗಿದ್ದು, ಜೊತೆಗೆ ಸರ್ಕಾರವು ಈಗಾಗಲೇ ದಿನಾಂಕ: 09.10.2020 ರ ಪತ್ರದಲ್ಲಿ ನೀಡಿರುವ ಸೂಚನೆ ಮತ್ತು ಸರ್ಕಾರದ ಅಧಿಸೂಚನೆ ದಿನಾಂಕ: 28.10.2020ನ್ನು ಆಧರಿಸಿ, 2020ರ ಡಿಸೆಂಬರ್ ಅಂತ್ಯಕ್ಕೆ ಸಹಾಯಕ ನಿರ್ದೇಶಕರುಗಳ ಅಂತಿಮ ಜೇಷ್ಠತಾ ಪಟ್ಟಿಯನ್ನು ಪರಿಷ್ಕರಿಸಿ ಸದರಿ ನ್ಯೂನ್ಯತೆಗಳನ್ನು ಸರಿಪಡಿಸಲು ಕೈಗಾರಿಕೆ ಮತ್ತು ವಾಣಿಜ್ಯ ನಿರ್ದೇಶನಾಲಯವು ತುರ್ತಾಗಿ ಕ್ರಮ ಕೈಗೊಳ್ಳುವುದು ಎಂದು ನಿರ್ದೇಶನ ನೀಡಲಾಗಿರುತ್ತದೆ.

ಆದರೆ, ಆಯುಕ್ತರು, ಕೈಗಾರಿಕಾಭಿವೃದ್ಧಿ ರವರು ಅಂತಿಮ ಜೇಷ್ಠತಾ ಪಟ್ಟಿಯನ್ನು ಪರಿಷ್ಕರಿಸಲು ಮಾನ್ಯ ಕೆ.ಎ.ಟಿ. ನ್ಯಾಯಾಲಯದಲ್ಲಿ 6 ಪ್ರಕರಣಗಳು ಬಾಕಿ ಇರುವುದರಿಂದ ಈಗ ಪರಿಷ್ಕರಿಸುವುದು ಸಾಧ್ಯವಿರುವುದಿಲ್ಲವೆಂದು ತಿಳಿಸಿರುತ್ತಾರೆ.

ಈ ಅಂಶಗಳ ಹಿನ್ನೆಲೆಯಲ್ಲಿ, ಸಿ.ಆ.ಸು. ಇಲಾಖೆ (ಸೇವಾ ನಿಯಮಗಳು)ಯ ಅಧಿಸೂಚನೆ ಸಂಖ್ಯೆ: DPAR 14 SSR 2006, ದಿನಾಂಕ: 18.08.2006 ರ ಪ್ರಕಾರ Karnataka Government Servants (Seniority) (Amendment) Rules, 2006ರ ನಿಯಮ 10ರ ತಿದ್ದುಪಡಿ ನಿಯಮದ ಪ್ರಕಾರ ಮಾನ್ಯ ಕೆ.ಎ.ಟಿ. ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿರುವ ಪ್ರಕರಣಗಳಿಗೆ ನ್ಯಾಯಾಲಯವು ನೀಡುವ ತೀರ್ಪಿನ ಷರತ್ತಿಗೊಳಪಟ್ಟು, ಸರ್ಕಾರವು (ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯು) ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಅಂತಿಮ ಜೇಷ್ಠತಾ ಪಟ್ಟಿಯನ್ನು ಹೊರಡಿಸಲು ಸಿ.ಆ.ಸು. ಇಲಾಖೆಯ ಅಭಿಪ್ರಾಯ ಕೋರಲಾಗಿದ್ದು, ಸದರಿ ಅಂಶಕ್ಕೆ ಉಲ್ಲೇಖ (6)ರಂತೆ ಸಿ.ಆ.ಸು ಇಲಾಖೆಯು ಸಹಮತಿ ನೀಡಿರುತ್ತದೆ.

**ಅದರಂತೆ, ಅಧಿಸೂಚನೆ ಸಂಖ್ಯೆ:ಸಿಆಸುಇ 104 ಸೇನಿಎ 2021 ದಿನಾಂಕ:18-08-2006ರಂತೆ Karnataka Government Servants (Seniority) (Amendment) Rules, 2006 ರ ನಿಯಮ 10ರ ತಿದ್ದುಪಡಿಯಲ್ಲಿ ಕಲ್ಪಿಸಿರುವ ಆಸ್ಪದದನ್ವಯ ದಿನಾಂಕ:31-12-2020ಕ್ಕೆ ಅಂತ್ಯಗೊಂಡಂತೆ ಸಹಾಯಕ ನಿರ್ದೇಶಕರ ಕರಡು ಜೇಷ್ಠತಾ ಪಟ್ಟಿಯನ್ನು ಈ ಮೂಲಕ ಅನುಬಂಧ-1 ಮತ್ತು 2 ರಂತೆ ಪ್ರಕಟಿಸಲಾಗಿದೆ. ಪ್ರಸ್ತುತ ವೃಂದ ಮತ್ತು ನೇಮಕಾತಿ ನಿಯಮಗಳನ್ನು ದಿನಾಂಕ:23-12-2016 ರಿಂದ ಜಾರಿಗೆ ಬರುವಂತೆ ಪರಿಷ್ಕರಿಸಿರುವುದರಿಂದ, ವಿಲೀನಗೊಂಡ ಹುದ್ದೆಗಳನ್ನು 19ನೇ ಬ್ಲಾಕ್ ನಲ್ಲಿ ಇರಿಸಲಾಗಿದೆ. ಏಪ್ರಿಲ್ 2017ರಲ್ಲಿ ನೇಮಕಾತಿಯಿಂದ ನೇಮಕಗೊಂಡ ಸಹಾಯಕ ನಿರ್ದೇಶಕರುಗಳ ಹುದ್ದೆಗಳನ್ನು ಬ್ಲಾಕ್ 20ರಲ್ಲಿ ಇರಿಸಲಾಗಿದೆ.**

ಈ ಜೇಷ್ಠತಾ ಪಟ್ಟಿಯು ಮಾನ್ಯ ಕರ್ನಾಟಕ ಸರ್ಕಾರಿ ಆಡಳಿತ ನ್ಯಾಯ ಮಂಡಳಿಯು ನ್ಯಾಯ ಮಂಡಳಿಯಲ್ಲಿ ಬಾಕಿ ಇರುವ ಅರ್ಜಿಗಳಿಗೆ ಸಂಬಂಧಿಸಿದಂತೆ ನೀಡುವ ಅಂತಿಮ ತೀರ್ಪಿಗೊಳಪಟ್ಟಿರುತ್ತದೆ.

ಸದರಿ ಅಧಿಸೂಚನೆಯಲ್ಲಿ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಕರಡು ಜೇಷ್ಠತಾ ಪಟ್ಟಿ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ಸರ್ಕಾರದ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸಸೌಧ, ಬೆಂಗಳೂರು ಇವರಿಗೆ ಸಲ್ಲಿಸತಕ್ಕದ್ದು. ಅವಧಿ ಮೀರಿ ಬಂದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ನಾಗರಾಜು ಎಸ್)
ಸರ್ಕಾರದ ಅಧೀನ ಕಾರ್ಯದರ್ಶಿ,
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ
(ಸೇವೆಗಳು ಮತ್ತು ಸಮನ್ವಯ)

ಇವರಿಗೆ:

1.ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ ಇವರಿಗೆ ವಿಶೇಷ ರಾಜ್ಯಪತ್ರದಲ್ಲಿ ಪ್ರಕಟಿಸುವ ಸಲುವಾಗಿ.
2. ಕೈಗಾರಿಕಾಭಿವೃದ್ಧಿ ಆಯುಕ್ತರು ಮತ್ತು ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ.
3. ನಿರ್ದೇಶಕರು (ಎಂ.ಎಸ್.ಎಂ.ಇ), ಕೈಗಾರಿಕೆ ಮತ್ತು ಇಲಾಖೆ, ಬೆಂಗಳೂರು.
4. ಸರ್ಕಾರದ ಜಂಟಿ ಕಾರ್ಯದರ್ಶಿಗಳು, ಸಿ.ಆ.ಸು.ಇಲಾಖೆ (ಸೇವಾ ನಿಯಮಗಳು), ವಿಧಾನಸೌಧ.
5. ಅಪರ ನಿರ್ದೇಶಕರು (ಆಡಳಿತ), ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಬೆಂಗಳೂರು.
6. ಎಲ್ಲಾ ಅಪರ ನಿರ್ದೇಶಕರು / ಜಂಟಿ ನಿರ್ದೇಶಕರು /ಉಪ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ/ ಉಪ ನಿರ್ದೇಶಕರು (ಗ್ರಾಕೈ), ಜಿಲ್ಲಾ ಪಂಚಾಯತ್.
7. ಉಪ ನಿರ್ದೇಶಕರು, ಚಾಮರಾಜೇಂದ್ರ ತಾಂತ್ರಿಕ ಸಂಸ್ಥೆ, ಮೈಸೂರು.
8. ಲೆಕ್ಕಾಧಿಕಾರಿಗಳು (ಲೆಕ್ಕಪತ್ರ / ಲೆಕ್ಕ ಪರಿಶೋಧನೆ), ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಕೇಂದ್ರ ಕಛೇರಿ, ಬೆಂಗಳೂರು.
9.ಸಹಾಯಕ ನಿರ್ದೇಶಕರು (ನಗದು / ವಾರ್ತೆ), ಕೇಂದ್ರ ಕಛೇರಿ, ಬೆಂಗಳೂರು.
10.ಎಲ್ಲಾ ಸಹಾಯಕ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ.
11. ಶಾಖಾ ರಕ್ಷಾ ಕಡತ.

# ಅನುಬಂಧ – 1

## ದಿನಾಂಕ: 31-12-2020 ರಲ್ಲಿದ್ದಂತೆ ಸಹಾಯಕ ನಿರ್ದೇಶಕರು ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿ ಬ್ಲಾಕ್ ಅನುಸಾರ ರಿಕ್ತ ಸ್ಥಾನಗಳ ಹಂಚಿಕೆ ವಿವರ

| ಕ್ರ ಸಂ | ಬ್ಲಾಕ್ ಅವಧಿ | ಬ್ಲಾಕ್ ಅವಧಿಯಲ್ಲಿ ಉದ್ಭವವಾದ ರಿಕ್ತ ಸ್ಥಾನಗಳು | ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ನಿಗದಿಪಡಿಸಲಾದ ಕೋಟಾ | | | ಕೋಟಾ ಪ್ರಕಾರ ಲಭ್ಯವಾಗುವ ರಿಕ್ತ ಸ್ಥಾನಗಳು | | | ವಾಸ್ತವವಾಗಿ ಭರ್ತಿ ಮಾಡಲಾದ ರಿಕ್ತ ಸ್ಥಾನಗಳು | | | ಕೋಟಾ ಮಿತಿಯಲ್ಲಿ ಮಾಡಲಾದ ನೇಮಕಾತಿ | | | ಹೆಚ್ಚುವರಿ (+) ಕೊರತೆ (-) | | | ನಂತರದ ಬ್ಲಾಕ್‌ನಲ್ಲಿ ಹೊಂದಿಸಬೇಕಾದ ಹೆಚ್ಚುವರಿ ನೇಮಕಾತಿ | | | ನೇಮಕಾತಿಗಳ ಸಂಚಿತ ಹೆಚ್ಚುವರಿ (+) ಕೊರತೆ (-) | | | ಷರಾ ಜೇಷ್ಠತೆಗಾಗಿ ಕ್ರ.ಸಂ |
|---|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | | | ನೇ.ನೇ | ಆ.ಮೂ.ಮು | ಮುಂಬಡ್ತಿ | ನೇ.ನೇ | ಆ.ಮೂ.ಮು | ಮುಂಬಡ್ತಿ | ನೇ.ನೇ | ಆ.ಮೂ.ಮು | ಮುಂಬಡ್ತಿ | ನೇ.ನೇ | ಆ.ಮೂ.ಮು | ಮುಂಬಡ್ತಿ | ನೇ.ನೇ | ಆ.ಮೂ.ಮು | ಮುಂಬಡ್ತಿ | ನೇ.ನೇ | ಆ.ಮೂ.ಮು | ಮುಂಬಡ್ತಿ | ನೇ.ನೇ | ಆ.ಮೂ.ಮು | ಮುಂಬಡ್ತಿ | |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 | 18 | 19 | 20 | 21 | 22 | 23 | 24 | 25 |
| ಹಿಂದಿನ ಬ್ಲಾಕ್ | | | | | | | | | | | | | | | -83 | - | 0 | -83 | - | 0 | -83 | - | 0 | |
| 1 | 7ನೇ ಬ್ಲಾಕ್ 23/09/1978 ರಿಂದ 05/03/1981 | 64 | 50% | - | 50% | 32 | - | 32 | 9 | - | 24 | 9 | - | 24 | -23 | - | -8 | 106 | - | 8 | -106 | - | -8 | |
| 2 | 8 ನೇ ಬ್ಲಾಕ್ 06/03/1981 ರಿಂದ 17/06/1982 | 15 | 50% | - | 50% | 8 | - | 7 | 0 | - | 15 | 0 | - | 15 | -8 | - | +8 | 114 | - | 0 | -114 | - | 0 | |
| 3 | 9 ನೇ ಬ್ಲಾಕ್ 18/06/1982 ರಿಂದ 15/08/1982 | 8 | 50% | - | 50% | 4 | - | 4 | 12 | - | 4 | 12 | - | 4 | +8 | - | 0 | 106 | - | 0 | -106 | - | 0 | |
| 4 | 10 ನೇ ಬ್ಲಾಕ್ 16/08/1982 ರಿಂದ 12/12/1982 | 17 | 50% | - | 50% | 8 | - | 9 | 40 | - | 8 | 40 | - | 8 | +32 | - | 0 | 70 | - | 0 | -70 | - | 0 | |
| 5 | 11 ನೇ ಬ್ಲಾಕ್ 13/12/1982 ರಿಂದ 03/07/1986 | 31 | 50% | - | 50% | 16 | - | 15 | 19 | - | 9 | 19 | - | 9 | +3 | - | -6 | 67 | - | 6 | -67 | - | -6 | |
| 6 | 12 ನೇ ಬ್ಲಾಕ್ 04/07/1986 ರಿಂದ 27/04/1993 | 112 | 50% | - | 50% | 56 | - | 56 | 0 | - | 61 | 0 | - | 61 | -56 | - | +5 | 123 | - | 1 | -123 | - | -1 | |
| 7 | 13 ನೇ ಬ್ಲಾಕ್ 28/04/1993 ರಿಂದ 27/04/1994 | 4 | 50% | - | 50% | 2 | - | 2 | 5 | - | 4 | 5 | - | 4 | +3 | - | +2 | 120 | - | 0 | -120 | - | +1 | |
| 8 | 14 ನೇ ಬ್ಲಾಕ್ 28/04/1994 ರಿಂದ 13/06/2001 | 10' | 50% | - | 50% | 50 | - | 51 | 50 | - | 51 | 50 | - | 51 | 0 | - | 0 | 70 | - | 0 | -70 | - | +1 | |
| 9 | 15 ನೇ ಬ್ಲಾಕ್ 14/06/2001 ರಿಂದ 13/01/2003 | 34 | 40% | - | 60% | 14 | - | 20 | 0 | - | 34 | 0 | - | 34 | -14 | - | +14 | 84 | - | 0 | -84 | - | +15 | |

| ಕ್ರ. ಸಂ | ಬ್ಲಾಕ್ ಅವಧಿ | ಬ್ಲಾಕ್ ಅವಧಿಯಲ್ಲಿ ಉದ್ಯಮವಾದ ರಿಕ್ತ ಸ್ಥಾನಗಳು | ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ನಿಗದಿಪಡಿಸಲಾದ ಕೋಟಾ | | | ಕೋಟಾ ಪ್ರಕಾರ ಲಭ್ಯವಾಗುವ ರಿಕ್ತ ಸ್ಥಾನಗಳು | | | ವಾಸ್ತವವಾಗಿ ಭರ್ತಿ ಮಾಡಲಾದ ರಿಕ್ತ ಸ್ಥಾನಗಳು | | | ಕೋಟಾ ಮಿತಿಯಲ್ಲಿ ಮಾಡಲಾದ ನೇಮಕಾತಿ | | | ಹೆಚ್ಚುವರಿ (+) ಕೊರತೆ (-) | | | ನಂತರದ ಬ್ಲಾಕ್‌ನಲ್ಲಿ ಹೊಂದಿಸಬೇಕಾದ ಹೆಚ್ಚುವರಿ ನೇಮಕಾತಿ | | | ನೇಮಕಾತಿಗಳ ಸಂಚಿತ ಹೆಚ್ಚುವರಿ (+) ಕೊರತೆ (-) | | | ಷರಾ ಜೇಷ್ಠತೆಗಾಗಿ ಕ್ರ.ಸಂ |
|---|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | | | ನೇ.ನೇ | ಆ.ಮೂ.ಮು | ಮುಂಬಡ್ತಿ | ನೇ.ನೇ | ಆ.ಮೂ.ಮು | ಮುಂಬಡ್ತಿ | ನೇ.ನೇ | ಆ.ಮೂ.ಮು | ಮುಂಬಡ್ತಿ | ನೇ.ನೇ | ಆ.ಮೂ.ಮು | ಮುಂಬಡ್ತಿ | ನೇ.ನೇ | ಆ.ಮೂ.ಮು | ಮುಂಬಡ್ತಿ | ನೇ.ನೇ | ಆ.ಮೂ.ಮು | ಮುಂಬಡ್ತಿ | ನೇ.ನೇ | ಆ.ಮೂ.ಮು | ಮುಂಬಡ್ತಿ | |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 | 18 | 19 | 20 | 21 | 22 | 23 | 24 | 25 |
| 10 | 16 ನೇ ಬ್ಲಾಕ್ 14/01/2003 ರಿಂದ 09/03/2003 | 10 | 40% | - | 60% | 4 | - | 6 | 10 | - | 10 | 0 | - | 0 | +6 | - | -6 | 78 | - | 0 | -78 | - | +9 | |
| 11 | 17 ನೇ ಬ್ಲಾಕ್ 10/03/2003 ರಿಂದ 29/04/2004 | 8 | 30% | 10% | 60% | 2 | 1 | 5 | 0 | 8 | 0 | 0 | 8 | 0 | -2 | +7 | -5 | 80 | 0 | 0 | -80 | +7 | +4 | |
| 12 | 18 ನೇ ಬ್ಲಾಕ್ 01/05/2004 ರಿಂದ 22/12/2016 | 64 | 30% | 10% | 60% | 19 | 6 | 39 | 0 | 11 | 52 | 0 | 11 | 52 | -19 | +5 | +13 | 99 | 0 | 0 | -99 | +12 | +17 | |
| 13 | 19 ನೇ ಬ್ಲಾಕ್ 23/12/2016 ರಿಂದ 09/04/2017 | 78 (77 ಕೈಗಾರಿಕಾ ಉತ್ತೇಜನಾಧಿಕಾರಿ ಹುದ್ದೆಗಳ ವಿಲೀನ + 1 ರಿಕ್ತ ಸ್ಥಾನ) 1 ಹುದ್ದೆಗೆ ವರ್ಗೀಕರಣ | 30% | 10% | 60% | 0 | 0 | 1 | 0 | 0 | 1 | 0 | 0 | 1 | 0 | 0 | 1 | 99 | 0 | 0 | -99 | +12 | 0 | ,ಸರ್ಕಾರದ ಅಧಿಸೂಚನೆ ಸಂಖ್ಯೆ:ಸಿಐ 80 ಐಸಿಎಸ್ 2020 ದಿನಾಂಕ:28.10.2020 ರಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ದಿನಾಂಕ:23.12.2016ರಿಂದ ಅನ್ವಯವಾಗುವಂತೆ ತಿದ್ದುಪಡಿ ತರಲಾಗಿದೆ. |
| 14 | 20 ನೇ ಬ್ಲಾಕ್ 10/04/2017 ರಿಂದ ಓಪನ್ ಬ್ಲಾಕ್ | 37 | 30% | 10% | 60% | 11 | 4 | 22 | 10 | 3 | 22 | 10 | 3 | 22 | -1 | - 1 | 0 | 100 | 0 | 0 | -100 | +11 | 0 | |

(ನಾಗರಾಜು ಎಸ್)
ಸರ್ಕಾರದ ಅಧೀನ ಕಾರ್ಯದರ್ಶಿ,
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ
(ಸೇವೆಗಳು ಮತ್ತು ಸಮನ್ವಯ)

ಮಾನ್ಯ ಸರ್ವೋಚ್ಚ ನ್ಯಾಯಾಲಯವು ಎಂ.ಎ.ಸಂಖ್ಯೆ:1151/2018 ಮತ್ತು ರಿಟ್ ಅರ್ಜಿ ಸಂಖ್ಯೆ 764/2018 ಮತ್ತು ಸಂಬಂಧಿಸಿದ ಪ್ರಕರಣಗಳಲ್ಲಿ ದಿನಾಂಕ:10.05.2019 ರಂದು ನೀಡಿರುವ ತೀರ್ಪಿನ ಮೇರೆಗೆ ದಿನಾಂಕ:31.12.2020ಕ್ಕೆ ಅಂತ್ಯಗೊಂಡಂತೆ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಸಹಾಯಕ ನಿರ್ದೇಶಕರ ತಾತ್ಕಾಲಿಕ ಜೇಷ್ಠತಾ ಪಟ್ಟಿ.

| ಕ್ರ. ಸಂ. | ನೌಕರರ ಹೆಸರು ಶ್ರೀ-ಶ್ರೀಮತಿ. | ನೇ. ನೇ / ಮುಂಬಡ್ತಿ/ ಆ.ಮೂ.ಮುಂ | ಮೀಸಲಾತಿ ವರ್ಗ | ಜನ್ಮ ದಿನಾಂಕ | ಸೇವೆಗೆ / ವೃಂದಕ್ಕೆ ಸೇರಿದ ದಿನಾಂಕ | ನೈಜವಾಗಿ ಮುಂಬಡ್ತಿ ಹೊಂದಿದ | ಅರ್ಹತ ದಿನಾಂಕ | ಷರಾ |
|---|---|---|---|---|---|---|---|---|
| 1 | 2 | 3 | 4 | 5 | 6 | 7 | 9 | 10 |
| 1 | ಜಿ.ಮಹಾಲಿಂಗಪ್ಪ | ಮುಂಬಡ್ತಿ | | 05-08-1929 | 04-05-1979 | 22-09-1978 | 22-09-1978 | |
| 2 | ಎಂ. ರಾಜಗೋಪಾಲ್ | ಮುಂಬಡ್ತಿ | | 29-03-1930 | 04-05-1979 | 22-09-1978 | 22-09-1978 | |
| 3 | ಎನ್.ಸಿದ್ದಯ್ಯ | ಮುಂಬಡ್ತಿ | | 04-09-1932 | 04-05-1979 | 22-09-1978 | 22-09-1978 | |
| 4 | ಸಿ. ಅಬ್ದುಲ್ ರಹಮಾನ್ | ಮುಂಬಡ್ತಿ | | 02-08-1931 | 29-01-1976 | 22-09-1978 | 22-09-1978 | |
| 5 | ಎಂ. ಮಾರಪ್ಪ | ಮುಂಬಡ್ತಿ | | 30-10-1930 | 29-1-1976 | 22-9-1978 | 22-9-1978 | |
| 6 | ಹೆಚ್.ಎನ್. ಜ್ವಾಲಣ್ಣ | ಮುಂಬಡ್ತಿ | | 20-11-1929 | 04-05-1979 | 22-09-1978 | 22-09-1978 | |
| 7 ನೇ ಬ್ಲಾಕ್ 23-09-1978 ರಿಂದ 05-03-1981 | | | | | | | | |
| 7 | ಎ. ರಾಮಕೃಷ್ಣ | ನೇ.ನೇ | | 04-06-1950 | 23-09-1978 | 23-09-1978 | 23-09-1978 | |
| 8 | ಕೆ.ಎಲ್ ಲೋಕನಾಥ್ | ನೇ.ನೇ | | 20-6-1952 | 23-09-1978 | 23-09-1978 | 23-09-1978 | |
| 9 | ಎನ್.ಶ್ರೀರಾಮನ್ | ನೇ.ನೇ | | 12-10-1952 | 23-09-1978 | 23-09-1978 | 23-09-1978 | |
| 10 | ಎಸ್.ಬಿ. ಕೊಲ್ಹಾರ್ | ನೇ.ನೇ | | 01-06-1950 | 23-09-1978 | 23-09-1978 | 23-09-1978 | |
| 11 | ಜಿ.ಸಿ. ಇಂದ್ರರಾಜ ಅರಸ್ | ನೇ.ನೇ | | 04-11-1951 | 23-09-1978 | 23-09-1978 | 23-09-1978 | |
| 12 | ಡಿ. ನಾಗೇಂದ್ರ | ನೇ.ನೇ | ಪ.ಜಾ | 01-07-1946 | 23-09-1978 | 23-09-1978 | 23-09-1978 | |
| 13 | ಡಿ. ರಾಮನಾಥ | ನೇ.ನೇ | | 31-08-1952 | 23-09-1978 | 23-09-1978 | 23-09-1978 | |
| 14 | ವೆಂಕಟರಮಣಪ್ಪ | ನೇ.ನೇ | ಪ.ಜಾ | 10-09-1945 | 23-09-1978 | 23-09-1978 | 23-09-1978 | |
| 15 | ಹೆಚ್.ಡಿ. ವಿಜಯ ರಾಘವನ್ | ನೇ.ನೇ | | 01-06-1955 | 23-09-1978 | 23-09-1978 | 23-09-1978 | |
| 16 | ಜಿ.ಎಸ್. ಮಲ್ಲಿಕಾರ್ಜುನ್ | ಮುಂಬಡ್ತಿ | | 13-06-1930 | 04-05-1979 | 04-05-1979 | 04-05-1979 | |
| 17 | ಎಂ. ನರಸಯ್ಯ | ಮುಂಬಡ್ತಿ | ಪ.ಜಾ | 14-02-1937 | 04-05-1979 | 04-05-1979 | 04-05-1979 | |
| 18 | ಎಸ್. ಸ್ಯಾಮುಯಲ್ | ಮುಂಬಡ್ತಿ | | 10-07-1934 | 29-01-1976 | 04-05-1979 | 04-05-1979 | |
| 19 | ಎಸ್. ರಾಮಚಂದ್ರನ್ | ಮುಂಬಡ್ತಿ | | 27-04-1929 | 04-05-1979 | 04-05-1979 | 04-05-1979 | |
| 20 | ಎಂ. ಹಾಲಯ್ಯ | ಮುಂಬಡ್ತಿ | | 24-12-1929 | 13-09-1979 | 04-05-1979 | 04-05-1979 | |
| 21 | ಎ. ದಿನಕರ ಶೆಟ್ಟಿ | ಮುಂಬಡ್ತಿ | | 29-11-1933 | 13-09-1979 | 04-05-1979 | 04-05-1979 | |
| 22 | ಹೆಚ್. ಸದಾಶಿವಪ್ಪ | ಮುಂಬಡ್ತಿ | | 23-05-1936 | 25-11-1975 | 04-05-1979 | 04-05-1979 | |
| 23 | ಜೆ. ಹುಸೇನ್ ಖಾನ್ | ಮುಂಬಡ್ತಿ | | 08-12-1928 | 23-11-1983 | 04-05-1979 | 04-05-1979 | |